**ಓಎಸ್. ನಂ.*268/2022***

**ಪಿಡಬ್ಲೂ:*01***

**ಇಂದು ದಿನಾಂಕ:*01.02.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲು : 3 ನೇ ಪ್ರತಿವಾದಿ ಪರ ಶ್ರೀ.ಎಂ.ಎಂ.ವಕೀಲರಿಂದಃ</u>**

ನಾನು 3 ನೇ ತರಗತಿ ಓದಿದ್ದೇನೆ. ಕನ್ನಡ ಓದಲು ಅಷ್ಟೋಂದು ಗೊತ್ತಿಲ್ಲ, ಅಕ್ಷರಗಳನ್ನು ಗುರುತಿಸಬಹುದು. ನನ್ನ ತಾತ ಮತ್ತು ತಂದೆ ಭೂತನಹಳ್ಳಿಯವರು. ನನ್ನ ವಂಶಸ್ಥರು ಭೂತನಹಳ್ಳಿಯವರು ಎಂದರೆ ಸರಿ. ನನ್ನ ಮದುವೆಯಾದ ದಿನಾಂಕ ಗೊತ್ತಿಲ್ಲ, 41 ವರ್ಷವಾಗಿದೆ. ನನ್ನ ಯಜಮಾನರು ಕಣ್ಣಂಗಾಲ ಗ್ರಾಮ, ವಿರಾಜಪೇಟೆ ತಾಲ್ಲೂಕು ಎಂದರೆ ಸರಿ. ನನ್ನ ತಂದೆಯ ತಮ್ಮ ಕರೀಗೌಡರು ತೀರಿಕೊಂಡಿದ್ದಾರೆ ಎಂದರೆ ಸರಿ. ನನ್ನ ಚಿಕ್ಕಮ್ಮ ನಿಂಗಮ್ಮ ಮತ್ತು ಅವರ ಮಕ್ಕಳು ಭೂತನಹಳ್ಳಿಯಲ್ಲಿ ವಾಸವಿದ್ದಾರೆ ಎಂದರೆ ಸರಿ. ನನ್ನ ಗಂಡನ ಮನೆಯಲ್ಲಿ ಸುಮಾರು 4 ವರ್ಷದೆ, ಆ ನಂತರ ತಂದೆ ಮನೆಯಲ್ಲಿ ವಾಸವಿದ್ದೇನೆ. ಯಾವ ವರ್ಷದಿಂದ, ಯಾವ ವರ್ಷದ ವರೆಗೆ ಗಂಡನ ಮನೆಯಲ್ಲಿ ಇದೆ ಅಂತ ಗೊತ್ತಿಲ್ಲ. ನನ್ನ ತಂದೆ 2018 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ಈ ಕೇಸು ಸಲ್ಲಿಸುವ ಮೊದಲು ಪಿರಿಯಾಪಟ್ಟಣದ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಓ.ಎಸ್.25/2015 ರಲ್ಲಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯೂ ಸ್ವತಃ ಹೇಳುವುದೇನೆಂದರೆ ಇದೇ ಕೇಸನ್ನು ಇಲ್ಲಿಗೆ ವರ್ಗಾಯಿಸಿದ್ದಾರೆ. ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಪ್ರಕರಣ ಇದ್ದಾಗ ನಾನು ಸಾಕ್ಷ್ಯ ಹೇಳಿದ್ದೀರ ಬಹುದು ಗೊತ್ತಿಲ್ಲ. ಕಾಮೇನಹಳ್ಳಿ ಗ್ರಾಮದ ಸರ್ವೆ ನಂ.40 ಹಾಗೂ ಬೆಮ್ಮತ್ತಿ ಗ್ರಾಮದ ಸರ್ವೆ ನಂ.23 ನನ್ನ ತಾತನಿಂದ ನನ್ನ ತಂದೆ ಹೆಸರಿಗೆ ಬಂದಿದೆ. ಸರ್ವೆ ನಂ.40 ಮತ್ತು ಸರ್ವೆ ನಂ.23 ರ ಜಮೀನು ಈಗ ಯಾರ ಹೆಸರಿನಲ್ಲಿ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಲು ಆಗುತ್ತದೆಯೇ ಎಂದರೆ ದಾಖಲೆಗಳನ್ನು ಈಗಾಗಲೆ ಕೊಟ್ಟಿದ್ದೇನೆ. ಸರ್ವೆ ನಂ.40 ಮತ್ತು ಸರ್ವೆ ನಂ.23 ಈಗ ಯಾರ ಹೆಸರಿನಲ್ಲಿ ಇದೆ ಅಂತ ಗೊತ್ತಿಲ್ಲ. ನನ್ನ ತಂದೆಯ ಚಿಕ್ಕ ತಮ್ಮ ಸಣ್ಣೇಗೌಡ @ ಚಿಕ್ಕಸಣ್ಣೇಗೌಡ ಅಂತ ಕರೆಯುತ್ತಾರೆ ಎಂದರೆ ಸರಿ. ಅವರು ಈಗ ಬದುಕಿಲ್ಲ. ಸಣ್ಣೇಗೌಡ @ ಚಿಕ್ಕಸಣ್ಣೇಗೌಡ ತೀರಿಕೊಂಡ ನಂತರ ಅವರ ಮಕ್ಕಳು ಜಯಣ್ಣ ಮತ್ತು ಸತೀಶ ಇದ್ದಾರೆ ಎಂದರೆ ಸರಿ.

ಸರ್ವೆ ನಂ.40 ಮತ್ತು ಸರ್ವೆ ನಂ.23 ಮೊದಲು ಕರೀಗೌಡರ ಹೆಸರಿನಲ್ಲಿ ಇತ್ತು, ಅವರು ತೀರಿಕೊಂಡ ನಂತರ ಅವರ ಪತ್ನಿ ನಿಂಗಮ್ಮ ರವರ ಹೆಸರಿನಲ್ಲಿ ಬರುತ್ತದೆ ಎಂದರೆ ಇರಬಹುದು. ಸಣ್ಣೇಗೌಡ @ ಚಿಕ್ಕಸಣ್ಣೇಗೌಡ ರವರು ತೀರಿಕೊಂಡ ನಂತರ ಅವರ ಮಕ್ಕಳು ಸತೀಶ ಮತ್ತು ಜಯಣ್ಣ ರವರ ಹೆಸರಿನಲ್ಲಿ ಬರುತ್ತದೆ ಎಂದರೆ ಇರಬಹುದು. ನನ್ನ ತಂದೆ ಮತ್ತು ಅವರ ಸಹೋದರರು ಸರ್ವೆ ನಂ.40 ಮತ್ತು ಸರ್ವೆ ನಂ.23 ರ ಜಮೀನುಗಳನ್ನು ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡಿರುವ ಮೇರೆಗೆ ನನ್ನ ಚಿಕ್ಕಪ್ಪಂದಿರ ಹೆಸರಿನಲ್ಲಿ ಬರುತ್ತಿತ್ತು, ನಂತರ ಅವರ ತೀರಿಕೊಂಡ ನಂತರ ಅವರ ಮಕ್ಕಳ ಹೆಸರಿನಲ್ಲಿ ಬರುತ್ತದೆ ಎಂದರೆ ಇರಬಹುದು. ಕಾಮೇನಳ್ಳಿ ಗ್ರಾಮದ ಸರ್ವೆ ನಂ.40 ಮತ್ತು ಬೆಮ್ಮತ್ತಿ ಗ್ರಾಮದ ಸರ್ವೆ ನಂ.23 ರ ಜಮೀನಿಗೆ ಸಂಬಂಧಿಸಿದ ಕ್ರಯ ಪತ್ರಗಳನ್ನು ನೋಡಿದ್ದೇನೆ. ಸರ್ವೆ ನಂ.40 ಮತ್ತು ಸರ್ವೆ ನಂ.23 ರ ಜಮೀನುಗಳನ್ನು ಮಾರಾಟ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಕಾಮೇನಹಳ್ಳಿಯ ಸರ್ವೆ ನಂ.45 ರ ಪಹಣಿ ಈಗ ಯಾರ ಹೆಸರಿನಲ್ಲಿ ಬರುತ್ತದೆ ಅಂತ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ಪಹಣಿ ಈಗ ನನ್ನ ಚಿಕ್ಕಪ್ಪಂದಿರ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಕಾಲಕ್ಕೆ ಸರ್ವೆ ನಂ.23, ಸರ್ವೆ ನಂ.40 ಮತ್ತು ಸರ್ವೆ ನಂ.45 ಯಾರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ರಲ್ಲಿ ಗುರುತಿಸಿರುವ ಕ್ರಯ ಪತ್ರದಲ್ಲಿ ಇರುವ ವಿಷಯಗಳನ್ನು ನಾನು ತಿಳಿದುಕೊಂಡಿಲ್ಲ, ಏಕೆಂದರೆ ನನಗೆ ಓದುವುದು ಗೊತ್ತಿಲ್ಲ. ನಿಮ್ಮ ವಕೀಲರ ಮೂಲಕ ಓದಿಸಿ ತಿಳಿದುಕೊಂಡಿದ್ದೀರ ಎಂದರೆ ನಮ್ಮ ತಂದೆ ಮಾರಾಟ ಮಾಡಿರುವುದು ಗೊತ್ತು. ನಿ.ಪಿ.11 ರಲ್ಲಿ ಯಾವ ಸರ್ವೆ ನಂಬರ್ ಬರೆದಿದೆ ಅಂತ ಗೊತ್ತಿದೆ. ಬಾಯಿ ಮಾತಿನ ಮೂಲಕ ಮಾಡಿಕೊಂಡಿರುವ ವಿಭಾಗದ ಪ್ರಕಾರ ಯಾವ ಯಾವ ಆಸ್ತಿ ಯಾರು ಯಾರಿಗೆ ಹೋಗಿದೆ ಎಂದರೆ ಅವರವರ ಭಾಗದಲ್ಲಿ ಅವರು ಇದ್ದಾರೆ. ವಿಭಾಗದ ಮೂಲಕ ನನ್ನ ತಂದೆ ಯಾವ ಯಾವ ಆಸ್ತಿ ಬಂದಿದೆ ಅಂತ ಗೊತ್ತಿಲ್ಲ, ದಾಖಲೆ ಕೊಟ್ಟಿದ್ದೇನೆ. ಭೂತನಹಳ್ಳಿಯಲ್ಲಿ ಒಂದು ನಿವೇಶನ ಹೊರತು ಪಡಿಸಿ ನಮ್ಮ ತಂದೆಗೆ ಬೇರೆ ಯಾವ ಆಸ್ತಿ ಬಂದಿಲ್ಲ ಎಂದರೆ ಸರಿಯಲ್ಲ.

**ಓಎಸ್. ನಂ.*268/2022***

**ಪಿಡಬ್ಲೂ:*01***

ಭೂತನಹಳ್ಳಿಯಲ್ಲಿ ಯಾವ ಯಾವ ಸರ್ವೆ ನಂಬರ್ ನ ಜಮೀನು ನಮ್ಮ ತಂದೆಗೆ ಬಂದಿತ್ತು ಅಂತ ಗೊತ್ತಿಲ್ಲ. ನನ್ನ ತಾತನಿಗೆ 10 ರಿಂದ 12 ಎಕರೆ ಜಮೀನು ಇತ್ತು. ಅದರ ಸರ್ವೆ ನಂಬರ್ ಹೇಳಲು ಗೊತ್ತಿಲ್ಲ. ನನ್ನ ತಂದೆಗೆ ಭೂತನಹಳ್ಳಿಯಲ್ಲಿ ಒಂದು ನಿವೇಶನ ಹೊರತು ಪಡಿಸಿ ಯಾವುದೇ ಜಮೀನು ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನನ್ನು ಬಿಟ್ಟ ನಂತರ ನನ್ನ ತಂದೆಯೊಡನೆ ಮೈಸೂರಿನ ಹೆಬ್ಬಾಳ್‌ನಲ್ಲಿ ವಾಸವಿದೆ. ನನ್ನ ವಾದ ಪತ್ರದಲ್ಲಿ ತೋರಿಸಿರುವ ನನ್ನ ಮತ್ತು ನನ್ನ ತಂದೆ ವಿಳಾಸ ಬೇರೆ ಬೇರೆಯಾಗಿತ್ತು ಎಂದರೆ ಸರಿ. ನನ್ನ ತಂದೆಗೆ 35 ವರ್ಷವಾಗಿದ್ದಾಗ ಮೈಸೂರಿಗೆ ಸ್ಥಳಾಂತವಾಗಿದ್ದರು ಎಂದರೆ ಸರಿಯಲ್ಲ, ಭೂತನಹಳ್ಳಿಯಲ್ಲೇ ಸಾಯುವವರೆಗೂ ಇದ್ದರು. ನನ್ನ ತಂದೆಯ ಆಧಾರ್ ಕಾರ್ಡ್ ಮತ್ತು ಗುರುತಿನ ಚೀಟಿ ಭೂತನಹಳ್ಳಿಯಲ್ಲಿ ಇದೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಸಾಧ್ಯವಿಲ್ಲ, ಏಕೆಂದರೆ ಅವುಗಳು ಎಲ್ಲಿ ಇದೆ ಅಂತ ಗೊತ್ತಿಲ್ಲ. ಅವುಗಳನ್ನು ಸಂಬಂಧಪಟ್ಟ ಕಚೇರಿಯಿಂದ ಪಡೆದುಕೊಂಡು ಹಾಜರು ಪಡಿಸಲು ಸಾಧ್ಯವಿರುವುದಿಲ್ಲ. ನನ್ನ ತಂದೆ ಮತ್ತು ಸಹೋದರರೆಲ್ಲರೂ ಸೇರಿ ಮೈಸೂರಿನಲ್ಲಿ Kamala food Products ಪ್ರಾರಂಭಿಸಿದ್ದರು ಎಂದರೆ ಸರಿಯಲ್ಲ. ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ ಮತ್ತು ಅದರ ಬಗ್ಗೆ ತಿಳಿದುಕೊಂಡಿದ್ದೇನೆ. ನನ್ನ ತಂದೆ ಬದುಕಿದ್ದಾಗ ನನ್ನ ಅಣ್ಣ ಕಾಳೇಗೌಡರಿಗೆ ಭೂತನಹಳ್ಳಿ ಸರ್ವೆ ನಂ.61/4 ರಲ್ಲಿ 18 ಗುಂಟೆಯನ್ನು ವ್ಯವಸ್ಥಾ ಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ ಹಾಗೂ ಮತ್ತೊಂದು ವ್ಯವಸ್ಥಾ ಪತ್ರದ ಮೂಲಕ ನಮ್ಮ ತಂದೆ ಸರ್ವೆನಂ.240/1 ರಲ್ಲಿ ಇರುವ ಮನೆಯನ್ನು ನನ್ನ ತಮ್ಮನ ಮಗ ಕಾರ್ತಿಕ್ ಎಂದರೆ 5ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ನನ್ನ ತಾತನ ಮೂಲಕ ನನ್ನ ತಂದೆಗೆ ಬಂದಿವೆ. ನನ್ನ ತಾತನಿಂದ ಬಂದಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ. ದಾವಾ ಆಸ್ತಿಗಳನ್ನು ನಮ್ಮ ತಂದೆ ಕ್ರಯ ಪತ್ರದ ಮೂಲಕ ಖರೀದಿಸಿದ್ದಾರೆ ಎಂದರೆ ಸರಿ. ಕಾಮೇನಹಳ್ಳಿ ಮತ್ತು ಬೆಮ್ಮತ್ತಿ ಗ್ರಾಮದಲ್ಲಿ ಇರುವ ಜಮೀನುಗಳನ್ನು ಮಾರಾಟ ಮಾಡಿ ನಮ್ಮ ತಂದೆ ಖರೀದಿಸಿದ್ದಾರೆ.

ಬೆಮ್ಮತ್ತಿ ಮತ್ತು ಕಾಮೇನಹಳ್ಳಿ ಗ್ರಾಮದಲ್ಲಿ ಇದ್ದ ಜಮೀನುಗಳನ್ನು ಮಾರಾಟ ಮಾಡಿರುವ ಕ್ರಯ ಪತ್ರಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ತಂದೆ ಪ್ರತಿವಾದಿ 2 ಮತ್ತು 5 ರವರಿಗೆ ವವಸ್ಥಾ ಪತ್ರದ ಮೂಲಕ ಕೊಟ್ಟಿರುವ ಆಸ್ತಿಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಗೊತ್ತಿಲ್ಲ. ಇದೇ ಪ್ರಕರಣದಲ್ಲಿ ಈ ಹಿಂದೆ 3 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಯನ್ನು ನಾನು ತಿಳಿದುಕೊಂಡಿಲ್ಲ. ದಾವಾ ಐಟಂ.1 ರಿಂದ 3 ರಲ್ಲಿ ಇರುವ ಆಸ್ತಿಗಳನ್ನು ನನ್ನ ತಂದೆ ವ್ಯವಸ್ಥಾ ಪತ್ರದ ಮೂಲಕ 3 ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ ಸುಳ್ಳು. ದಾವಾ ಐಟಂ.4 ರ ಆಸ್ತಿಯನ್ನು ನನ್ನ ತಂದೆ ವ್ಯವಸ್ಥಾ ಪತ್ರದ ಮೂಲಕ 5 ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. 3 ನೇ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯಲ್ಲಿ ಏನು ಹೇಳಿದ್ದಾರೆ ಅಂತ ನಾನು ತಿಳಿದುಕೊಂಡಿಲ್ಲ. ದಾವಾ ಆಸ್ತಿಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆ ದಿನಸಿ ವ್ಯಾಪಾರ ಮಾಡುತ್ತಿದ್ದರಿಂದ ಪಿತ್ರಾರ್ಜಿತವಾಗಿದ್ದ ಒಂದು ನಿವೇಶವನ್ನು ಮಾತ್ರ ಇಟ್ಟುಕೊಂಡು ಸರ್ವೆ ನಂ.23, ಸರ್ವೆ ನಂ.40 ಮತ್ತು ಸರ್ವೆ ನಂ.45 ಅನ್ನು ಅವರ ಸಹೋದರರಿಗೆ ಕೊಟ್ಟು ನನ್ನ ತಂದೆ ಯಾವುದೇ ಜಮೀನುಗಳನ್ನು ಇಟ್ಟುಕೊಳ್ಳಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದ ಜಮೀನಿನ ಸರ್ವೆ ನಂಬರ್ ಗಳು ಗೊತ್ತಿಲ್ಲ ಆದರೆ ಆ ಜಮೀನುಗಳು ಬೆಮ್ಮತ್ತಿ, ಕಾಮೇನಹಳ್ಳಿ ಮತ್ತು ಭೂತನಹಳ್ಳಿಯಲ್ಲಿ ಇದ್ದವು. ಆ ಜಮೀನುಗಳ ಚೆಕ್ಕುಬಂದಿ ಹೇಳಲು ಗೊತ್ತಿಲ್ಲ. ಭೂತನಹಳ್ಳಿಯಲ್ಲಿ ಇದ್ದ ನಿವೇಶನವನ್ನು ನನ್ನ ತಂದೆ ಮತ್ತು ಅಣ್ಣಂದಿರೂ ಬೋಗ್ಯ ಮಾಡಿ ನನ್ನ ಹೆಸರಿನಲ್ಲಿ Kamala food Products ಸ್ಥಾಪಿಸಿದ್ದರು ಎಂದರೆ ಸರಿಯಲ್ಲ. Kamala food Products ಸ್ಥಾಪಿಸಿದ್ದಾಗ ನನ್ನ ಸಹೋದರ ಮಹದೇವ ಬದುಕಿದ್ದರು ಎಂದರೆ Kamala food Products ಸ್ಥಾಪನೆ ಮಾಡಿಲ್ಲ. ನಿವೇಶನವನ್ನು ಬೋಗ್ಯ ಮಾಡಿರುವ ಬಗ್ಗೆ ದಾಖಲೆ ನೋಡಿದ್ದೀರ ಎಂದರೆ ನಿವೇಶವನ್ನು ಬೋಗ್ಯ ಮಾಡಿರುವುದಿಲ್ಲ. ದಿನಾಂಕಃ 26-04-1989 ರಂದು ನನ್ನ ತಂದೆ ಮತ್ತು ಸಹೋದರರು ನಿವೇಶವನ್ನು ಕೆ.ಎಸ್.ಎಫ್.ಸಿ.ಗೆ ಬೋಗ್ಯ ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ನಿವೇಶನ ಹಿಂದೆ ನನ್ನ ತಾತನ ಹೆಸರಿನಲ್ಲಿ ಇತ್ತು ಅವರು ತೀರಿಕೊಂಡ ನಂತರ ಇಂದಿಗೂ ಸಹಾ ನನ್ನ ತಂದೆ ಹೆಸರಿನಲ್ಲಿ ಬರುತ್ತಿದೆ ಎಂದರೆ ಗೊತ್ತಿಲ್ಲ.

ನಿವೇಶನದ ವಿಸ್ತೀರ್ಣ ಎಷ್ಟು ಇದೆ ಅಂತ ಗೊತ್ತಿಲ್ಲ. ಅದು ಖಾಲಿ ಜಾಗ ಎಂದರೆ ಸರಿ. ಆ ನಿವೇಶನದಲ್ಲಿ ಇದ್ದ ಹಳೆಯ ಮನೆ ಬಿದ್ದು ಹೋಗಿ 7 ವರ್ಷವಾಗಿದೆ. ನನ್ನ 3 ಜನ ಸಹೋದರರು 1991 ರಿಂದಲೂ ಮೈಸೂರಿನಲ್ಲಿ ವಾಸವಿದ್ದಾರೆ ಎಂದರೆ ಗೊತ್ತಿಲ್ಲ. ಖಾಲಿ ನಿವೇಶನವನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ಸಹೋದರರು ಮೈಸೂರಿನಲ್ಲಿ ವಾಸವಿರುವುದಾಗಿ ವಾದ ಪತ್ರದಲ್ಲಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹೋದರರು ಭೂತನಹಳ್ಳಿಯಲ್ಲಿ ಇದ್ದ ಮನೆಯಲ್ಲಿ ವಾಸವಿದ್ದರು, ಅದು ಬಿದ್ದು ಹೋಗಿದೆ ಮನೆಯ ನಂಬರ್ ಗೊತ್ತಿಲ್ಲ. 2 ನೇ ಪ್ರತಿವಾದಿಯ ಚಿತಾವಣೆ ಮೇರೆಗೆ 3 ನೇ ಪ್ರತಿವಾದಿ ಹೆಸರಿನಲ್ಲಿ ಇರುವ ಆಸ್ತಿಗಳನ್ನು ಮಾತ್ರ ಸೇರಿಸಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಬಂದಿರುವ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಅವರಿಗೆ ಯಾವ ಆಸ್ತಿಗಳು ಇದೆ ಅಂತ ಗೊತ್ತಿಲ್ಲ. 5 ನೇ ಪ್ರತಿವಾದಿ ಹೆಸರಿನಲ್ಲಿ ಯಾವ ಯಾವ ಆಸ್ತಿಗಳು ಇವೆ ಅಂತ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ 2 ನೇ ಪ್ರತಿವಾದಿ ಮಾತು ಕೇಳಿ 3 ನೇ ಪ್ರತಿವಾದಿಗೆ ಕಿರುಕುಳ ಕೊಡುವ ಉದ್ದೇಶದಿಂದ ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮೈಸೂರಿನಲ್ಲಿ 40 ವರ್ಷಗಳಿಂದಲೂ Kamala food Products ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮೈಸೂರಿನಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಅಂತ ಗೊತ್ತಿಲ್ಲ. 2 ನೇ ಪ್ರತಿವಾದಿ Kamala food Products ನಡೆಸುತ್ತಿರುವ ವಿಷಯ ನನಗೆ ಗೊತ್ತಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರ್ನಾಟಕ ಕೈಗಾರಿಕ ಅಭಿವೃಧಿ ಮಂಡಳಿಯವರು 2 ನೇ ಪ್ರತಿವಾದಿಗೆ ದಿನಾಂಕಃ 24-05-94 ರಂದು ಫ್ಲ್ಯಾಟ್ ನಂ.260 ರಲ್ಲಿ ಕೈಗಾರಿಕೆ ನಡೆಸಲು ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. Kamala food Products ಪ್ರಾರಂಭಿಸಿದ ಕಾಲದಲ್ಲಿ ನಾನು, ನನ್ನ ತಾಯಿ ಮತ್ತು ಅತ್ತಿಗೆಯರು ಪಾಲುದಾರಳಾಗಿದ್ದರು ಎಂದರೆ ಸರಿಯಲ್ಲ. ನನ್ನ ಅಣ್ಣಂದಿರೂ ಚೆನ್ನಾಗಿ ಇರಲ್ಲಿ ಎಂಬ ಉದ್ದೇಶದಿಂದ 40 ಸಾವಿರ ರೂಪಾಯಿ ಕೊಟ್ಟಿದೆ ಎಂದರೆ ಸುಳ್ಳು ಆದರೆ ನಮ್ಮ ತಂದೆ ಕಮಲಾಪುರದಲ್ಲಿ ಜಮೀನು ಖರೀದಿಸಲು 40 ಸಾವಿರ ಕೊಟ್ಟಿದ್ದೆ.

**ಓಎಸ್. ನಂ.*268/2022***

**ಪಿಡಬ್ಲೂ:*01***

ನನ್ನ ತಂದೆ ಕಮಲಾಪುರದಲ್ಲಿ ಜಮೀನು ಖರೀದಿಸಿ ಸುಮಾರು 17 ವರ್ಷವಾಗಿದೆ. ನನ್ನ ತಂದೆಗೆ ನಾನು ಯಾವುದೇ ಹಣ ಕೊಟ್ಟಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**